Mysore Re-enacting Bill 1973—Governor's Message (Announcement)

MADAM SPEAKER.—I have received a message from the Governor which reads as follows.

"In pursuance of Clauses (i) and (iii) of Article 7 of the Constitution of India, I Mohalal Sukhadia, Governer of Mysore, do hereby recommend that the Mysore Re-enacting Bill, 1973 be introduced and considered by the Mysore Legislative Assembly."

SRI M. Y. GHORPADE.—I beg to introduce the Mysore Re-Enacting Bill, 1973 under Rule 69 of the Rules of Procedure and Conduct of Business of the Mysore Legislative Assembly.

MADAM SPEAKER.—The Bill is introduced. **

ಶ್ರೀ ಎಸ್. ಬಂಗಾರಪ್ಪ.—ಮೈಸೂರು ರಿ ಎನಾ್ಯಕ್ಟ್ಮೆಂಗ್ ಬಿಲ್ ಅನ್ನು ಏನು ಮಾನ್ಯ ಅರ್ಥ ಸಚಿವರು ಇಂಟ್ರೊಡ್ಯೂಸ್ ಮಾಡಿದ್ದಾರೆ, ಅದರ ಆಂಬ್ಜೆಕ್ಟ್ಸ್ ಮತ್ತು ರೀಸನ್ಸ್ ಏನು ; ಯಾವ ಉದ್ದೇಶಕ್ಕಾಗಿ ಎಂದು ಗೊತ್ತಾಗುವುದಿಲ್ಲ. ಅರ್ಥ ಸಚಿವರು ಇದರ ಬಗ್ಗೆ ವಿವರಣೆಯನ್ನು ಕೊಡುವುದು ಒಳ್ಳೆಯದು.

ಅಧ್ಯಕ್ಷರು.—ಅದರಲ್ಲಿದೆ ಓದಿಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಏತಕ್ಕೋಸ್ಕರ ಈ ಬಿಲ್ಲನ್ನು ಇಂಟರ್‌ಡ್ಯೂಸ್ ಮಾಡಿದ್ದಾರೆ ಎನ್ನುವ ಬಗ್ಗೆ ಹೇಳಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಅದನ್ನು ಕನ್‌ಸಿಡರೇಷನ್ ಸ್ಟೇಜಿನಲ್ಲಿ ಹೇಳುವುದು ನನ್ನ ಕರ್ತವ್ಯ. ರೂಲ್ಸ್ ಪ್ರಕಾರ ಇಂಟರ್‌ಡ್ಯೂಸ್ ಎಂದು ಮಾತ್ರ ಹೇಳತಕ್ಕದ್ದು. ಕನ್‌ಸಿಡರೇಷನ್‌ಗೆ ಅದನ್ನು ತೆಗೆದುಕೊಳ್ಳುವಾಗ, ಎಲ್ಲವನ್ನು ವಿವರವಾಗಿ ಹೇಳಬೇಕಾಗುತ್ತದೆ. ಸಂಕ್ಷಿಪ್ತವಾಗಿ ತಿಳಿದುಕೊಳ್ಳಬೇಕಾದರೆ, ಬಿಲ್ಲಿನಲ್ಲಿ ಅಚ್ಚು ಹಾಕಿದ್ದೇವೆ, ಅದನ್ನು ಮಾನ್ಯ ಸದಸ್ಯರು ದಯವಿಟ್ಟು ಓದಬೇಕು.

Personal Explanation of Sri K. H. Patil, Minister for Agriculture and Forests

re : **Sri C. M. Arumugham's speech on Governor's Address**

† ಶ್ರೀ ಕೆ. ಎಚ್. ಪಾಟೀಲ್ (ವ್ಯವಸಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು). — ಮಾನ್ಯ ಸಭಾಧ್ಯಕ್ಷಣೀಯವರೇ, 21-2-1973ರಂದು, ಗವರ್ನರ್ ಅವರಿಗೆ ಅಭಿನಂದನಾ ಭಾಷಣ ಮಾಡುವಾಗ, ಈ ಸಭೆಯ ಹಿರಿಯ ಸದಸ್ಯರಾದ ಶ್ರೀಮಾನ್ ಸಿ. ಎಂ. ಅರ್ಮುಗಂ ಅವರು ಕೆಲವು ಮಾತುಗಳನ್ನು ಅವರಿಗೆ ಬಂದ ವರದಿಗಳ ಆಧಾರದ ಮೇಲೆ ಹೇಳಿದ್ದಾರೆ. ಅವರು ಹೇಳಿರುವುದನ್ನು, ಉದ್ದೇಶಪೂರ್ವಕವಾಗಿ ಹೇಳಿದ್ದಾರೆ ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಮಾನ್ಯ ಅರ್ಮುಗಂ ಅವರ ಬಗ್ಗೆ ನನಗೆ ಗೌರವ ಇದೆ. ನಮ್ಮ ನಡವಳಿಕೆಗಳನ್ನು ಅವರು ಬಯಲಿಗೆ ಎಳೆಯುವುದರಲ್ಲಿ ಬಹಳ ಕಷ್ಟ ಪಟ್ಟು ಕೆಲಸ ಮಾಡುವಂಥ ಹಿರಿಯ ಸದಸ್ಯರು. ಅವರು ಈ ರೀತಿ ಹೇಳಿರಬಾರದು ಅವರು ತಿಳಿದುಕೊಂಡಂಥ ಅಭಿಪ್ರಾಯ, ಸರಿಯಾಗಿ ಅರ್ಥಮಾಡಿಕೊಂಡಿದ್ದರೆ ಆ ರೀತಿ ಅವರು ಹೇಳುತ್ತಾ ಇರಲಿಲ್ಲ. ಅವರು ವಿಷಯದ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗದೆ ವೈಯುಕ್ತಿಕವಾದ ಅರ್ಥವನ್ನು ಕಲ್ಪಿಸುವ ರೀತಿಯಲ್ಲಿ ಭಾಷಣ ಮಾಡಿದ್ದಾರೆ. ಸಹಕಾರ ಸಂಘದವರು ಪತ್ರ ಬರೆದರು, ಪತ್ರದಲ್ಲಿ ಸಹಕಾರ ಸಂಘದ ಹೆಸರು ಗೊತ್ತಾಗಲಿಲ್ಲ. ಅದು ಗದಗ್

** The Bill is reproduced as annexure to this volume.